# ಚೀನಾ ಕ್ರೌರ್ಯ ಬಯಲಿಗೆಳೆದ ಮೇಘಾ

ಪತ್ರಿಕೆಗಳ ಪುಟ ತಿರುವಿದರೆ ಬರಿ ಕೋವಿಡ್ ಸುದ್ದಿಗಳೇ ತುಂಬಿರುವ ಈ ಸಂದರ್ಭದಲ್ಲಿ ಕಳೆದ ವಾರ ಹಾಯ್ ಎನಿಸುವಂತಹ ಸುದ್ದಿಯೊಂದು ಅಮೆರಿಕದಿಂದ ಬಂತು. ಅದು ಪುಲಿಟ್ಸರ್ ಪ್ರಶಸ್ತಿಗಳ ಪ್ರಕಟಣೆಯ ಸುದ್ದಿ. ‘ಅಂತರರಾಷ್ಟ್ರೀಯ ತನಿಖಾ ವರದಿಗಾರಿಕೆ’ಗಾಗಿ ಭಾರತೀಯ ಮೂಲದ ಮೇಘಾ ರಾಜಗೋಪಾಲನ್ ಆ ಪ್ರಶಸ್ತಿಯನ್ನು ಪಡೆದಿದ್ದರು. ನೊಬೆಲ್‌ನಂತೆ ಈ ಪ್ರಶಸ್ತಿಯ ಜತೆಗೆ ಸಿಗುವ ಮೊತ್ತವೇನೂ ದೊಡ್ಡದಲ್ಲದಿದ್ದರೂ ಮಾಧ್ಯಮ ರಂಗದಲ್ಲಿ ಈ ಪ್ರಶಸ್ತಿ ಹೊತ್ತು ತರುವ ಮರ್ಯಾದೆ ಮಾತ್ರ ಆ ಪುರಸ್ಕಾರದಷ್ಟೇ ದೊಡ್ಡದು.

ಚೀನಾದ ಬಂದೀಖಾನೆಯಲ್ಲಿ ಇರುವ ಮುಸ್ಲಿಮರ ಸ್ಥಿತಿಗತಿ ಕುರಿತ ತನಿಖಾ ವರದಿಯನ್ನು ಮಾಡಿದ್ದಕ್ಕೆ ಮೇಘಾ ಅವರಿಗೆ ಈ ಪುರಸ್ಕಾರ ಸಂದಿದೆ. ಹಾಂಗ್‌ಕಾಂಗ್‌ನಲ್ಲಿ ಪತ್ರಿಕೋದ್ಯಮ ಓದಿದ ಆಕೆ ಅಲ್ಲಿಂದ ರಾಯಿಟರ್ಸ್ ಫೌಂಡೇಷನ್‌ನಲ್ಲಿ ತರಬೇತಿ ಪಡೆದರು. ಬಳಿಕ ಚೀನಾದ ರಾಜಕೀಯ ವರದಿಗಾರ್ತಿಯಾಗಿ ಬೀಜಿಂಗ್‌ನಲ್ಲಿ ನೆಲೆಸಿದ್ದರು. ಆ ಸಮಯದಲ್ಲಿಯೇ ಷಿನ್‌ಜಿಯಾಂಗ್ ಪ್ರಾಂತ್ಯದಲ್ಲಿ ಸಾವಿರ ಸಾವಿರ ಸಂಖ್ಯೆಯಲ್ಲಿ ಮುಸ್ಲಿಮರನ್ನು ಬಂಧಿಸಿಟ್ಟು, ಅವರನ್ನು ಶೋಷಣೆ ಮಾಡುತ್ತಿದ್ದುದು ಅವರ ಗಮನಕ್ಕೆ ಬಂದಿತ್ತು. ರಾಯಿಟರ್ಸ್‌ನ ವರದಿಗಾರ್ತಿಯಾಗಿ ನಾಲ್ಕು ವರ್ಷ ಕೆಲಸ ಮಾಡಿರುವ ಮೇಘಾ, ಆ ಸುದ್ದಿಸಂಸ್ಥೆಯನ್ನು ತೊರೆದು ಸುದೀರ್ಘ ವರದಿಗಳಿಗೆ ಅವಕಾಶ ನೀಡುವ ‘ಬಝ್‌ಫೀಡ್ ನ್ಯೂಸ್’ ವೆಬ್‌ಸೈಟ್‌ನ ವರದಿಗಾರ್ತಿಯಾಗಿ ಸೇರ್ಪಡೆಯಾದರು.

ಮುಸ್ಲಿಮರನ್ನು ತಾನು ಎಲ್ಲಿಯೂ ಬಂಧಿಸಿಟ್ಟಿಲ್ಲ ಎಂದು ಚೀನಾ ಹೇಳುತ್ತಿದ್ದಾಗ, ಷಿನ್‌ಜಿಯಾಂಗ್ ಪ್ರಾಂತ್ಯದ ಅಂತಹ ಬಂಧಿತರ ಶಿಬಿರಕ್ಕೆ ಭೇಟಿಕೊಟ್ಟ ಮೊದಲ ಪತ್ರಕರ್ತೆ ಮೇಘಾ. 2017ರಲ್ಲಿಯೇ ಆಕೆ ಬಂಧಿತರ ಶಿಬಿರದ ಸೆರೆಯಾಳುಗಳನ್ನು ಮಾತನಾಡಿಸುವ ಪ್ರಯತ್ನವನ್ನೂ ಮಾಡಿದ್ದರು. ಆದರೆ, ಅವರು ತನಿಖಾ ವರದಿಯಲ್ಲಿ ನಿರತರಾಗಿದ್ದಾರೆ ಎನ್ನುವುದು ಗೊತ್ತಾಗುತ್ತಿದ್ದಂತೆ ವೀಸಾವನ್ನು ರದ್ದುಪಡಿಸಿದ ಚೀನಾ, ದೇಶದಿಂದ ಅವರನ್ನು ಹೊರಗಟ್ಟಿತು.

ಬೀಜಿಂಗ್‌ನಿಂದ ಲಂಡನ್‌ಗೆ ನೆಲೆ ಬದಲಿಸಿದ ಮೇಘಾ, ತಮ್ಮ ತನಿಖಾ ವರದಿಗಾರಿಕೆಯ ಪಟ್ಟನ್ನು ಮಾತ್ರ ಸಡಿಲಿಸಲಿಲ್ಲ. ವಾಸ್ತುಶಿಲ್ಪಗಳು ಮತ್ತು ಉಪಗ್ರಹ ಚಿತ್ರಗಳನ್ನು ವಿಜ್ಞಾನ ಶಾಸ್ತ್ರೀಯವಾಗಿ ವಿಶ್ಲೇಷಿಸುವ ಪರವಾನಗಿ ಹೊಂದಿದ ವಾಸ್ತುಶಿಲ್ಪಿ ಅಲಿಸನ್ ಕಿಲ್ಲಿಂಗ್ ಮತ್ತು ದತ್ತಾಂಶಗಳನ್ನು ವಿಶ್ಲೇಷಿಸಲು ಪತ್ರಕರ್ತರಿಗೆ ತಂತ್ರಾಂಶ ರೂಪಿಸಿ ಕೊಡುವ ಕ್ರಿಸ್ಟೋ ಬಷೆಕ್ ಇಬ್ಬರಿಂದಲೂ ನೆರವು ಕೋರಿದರು. ಷಿನ್‌ಜಿಯಾಂಗ್ ಪ್ರಾಂತಕ್ಕೆ ಸಂಬಂಧಿಸಿದ ಉಪಗ್ರಹ ಚಿತ್ರಗಳು, ದತ್ತಾಂಶಗಳನ್ನು ಪಡೆದು ವಿಶ್ಲೇಷಣೆ ನಡೆಸಿದರು.

ಆರಾಮ ಕುರ್ಚಿಯ ಪತ್ರಿಕೋದ್ಯಮವನ್ನೇನೂ ಅವರು ಮಾಡಲಿಲ್ಲ. ಸ್ಥಳಕ್ಕೆ ಹೋಗಿ ವರದಿಮಾಡುವ ‘ಸಾಂಪ್ರದಾಯಿಕ ಹಾದಿ’ಯಲ್ಲೇ ಅವರು ಹೆಜ್ಜೆ ಹಾಕಿದರು. ಚೀನಾದಲ್ಲಿ ವರದಿಗಾರಿಕೆಗೆ ಆಸ್ಪದ ಇಲ್ಲದಿದ್ದರೆ ಏನಂತೆ? ಷಿನ್‌ಜಿಯಾಂಗ್ ಪ್ರಾಂತಕ್ಕೆ ಹೊಂದಿಕೊಂಡ ಕಜಕಸ್ತಾನ ದೇಶದಲ್ಲಿ ಆಶ್ರಯ ಪಡೆದಿರುವ ಮುಸ್ಲಿಮರನ್ನು ಮಾತನಾಡಿಸುವೆ ಎಂದು ಅವರು ಹೊರಟುಬಿಟ್ಟರು. ಉಪಗ್ರಹದಿಂದ ಸೆರೆಹಿಡಿದ ಚಿತ್ರಗಳು, ಷಿನ್‌ಜಿಯಾಂಗ್ ಪ್ರಾಂತದ ದತ್ತಾಂಶಗಳು ಹಾಗೂ ಕಜಕಸ್ತಾನದಲ್ಲಿ ಆಶ್ರಯ ಪಡೆದಿರುವ ಮುಸ್ಲಿಮರ ಹೇಳಿಕೆಗಳ ಆಧಾರದ ಮೇಲೆ ಚೀನಾ ಅಲ್ಲಗಳೆಯಲು ಸಾಧ್ಯವೇ ಇಲ್ಲದಂತಹ ಸರಣಿ ವರದಿಗಳು ಸಿದ್ಧವಾದವು.



‘ಮೇಘಾ ಅವರು ಬರೆದ ಸರಣಿ ವರದಿಗಳು ನಮ್ಮ ಕಾಲದ ಮಾನವ ಹಕ್ಕುಗಳ ಉಲ್ಲಂಘನೆಯ ಕ್ರೂರ ಕಥೆಯನ್ನು ಹೇಳುತ್ತಿವೆ’ ಎಂದು ಬಝ್‌ಫೀಡ್ ನ್ಯೂಸ್ ಹೇಳಿಕೊಂಡಿದೆ. ‘ನನಗೆ ಪ್ರಶಸ್ತಿ ಸಿಗುತ್ತದೆ ಎಂದು ಕನಸು ಮನಸ್ಸಿನಲ್ಲೂ ನಾನು ಎಣಿಸಿರಲಿಲ್ಲ. ಸಹೋದ್ಯೋಗಿಗಳು ಕರೆಮಾಡಿ ಅಭಿನಂದನೆ ಹೇಳಿದಾಗ ನನಗೆ ಪ್ರಶಸ್ತಿ ಬಂದಿದ್ದನ್ನು ನಂಬಲಾಗಲಿಲ್ಲ’ ಎಂದು ಮೇಘಾ ಹೇಳುತ್ತಾರೆ.

‘ಪ್ರಾಣಾಪಾಯವನ್ನು ಲೆಕ್ಕಿಸದೆ ಬಂದೀಖಾನೆಗಳ ಸತ್ಯ ಸಂಗತಿಗಳನ್ನು ಬಯಲಿಗೆಳೆಯಲು ನೆರವಾದ ಎಲ್ಲರ ನೆರವನ್ನು ನಾನು ತುಂಬು ಹೃದಯದಿಂದ ನೆನೆಯುತ್ತೇನೆ. ಏಕೆಂದರೆ, ಸರ್ಕಾರದ ಅತಿರೇಕಗಳ ವಿರುದ್ಧ ಹೀಗೆ ಧೈರ್ಯದಿಂದ ಮಾತನಾಡುವುದು ಸುಲಭವಲ್ಲ. ಅವರು ವಾಸ್ತವ ಸಂಗತಿಯನ್ನು ಬಿಚ್ಚಿಡದಿದ್ದರೆ ನನ್ನ ವರದಿಯೂ ಅಪೂರ್ಣವಾಗುತ್ತಿತ್ತು’ ಎಂದು ವಿವರಿಸುತ್ತಾರೆ.

ಮೇಘಾ ಅವರ ಈ ಸಾಹಸ ಶುರುವಾಗಿದ್ದು ಹೇಗೆ? ಅದೊಂದು ತುಂಬಾ ಸರಳವಾದ ಪ್ರಶ್ನೆಯಿಂದ. ‘ಷಿನ್‌ಜಿಯಾಂಗ್ ಪ್ರಾಂತದಲ್ಲಿ ಬಂಧಿಸಲಾದ ಹತ್ತು ಲಕ್ಷಕ್ಕೂ ಅಧಿಕ ಜನ ಎಲ್ಲಿದ್ದಾರೆ’ ಎನ್ನುವುದೇ ಆ ಪ್ರಶ್ನೆ. 50 ಸಾವಿರ ನೆಲೆಗಳಿಗೆ ಸಂಬಂಧಿಸಿದ ಉಪಗ್ರಹ ಚಿತ್ರಗಳನ್ನು ಪಡೆದು ವಿಶ್ಲೇಷಣೆ ಮಾಡುತ್ತಾ ಹೋದಂತೆ ಮೇಘಾ ಅವರ ತಂಡಕ್ಕೆ 260 ಬೃಹತ್ ಕಟ್ಟಡಗಳು ಗೋಚರಿಸಿದವು. ಅಲ್ಲಿ ಹತ್ತು ಸಾವಿರಕ್ಕೂ ಅಧಿಕ ಜನರನ್ನು ಬಂಧಿಸಿಟ್ಟು, ಫ್ಯಾಕ್ಟರಿಗಳಲ್ಲಿ ಅವರನ್ನು ಗುಲಾಮರಂತೆ ದುಡಿಸಿಕೊಳ್ಳುತ್ತಿರುವುದು ದೃಢಪಟ್ಟಿತು.

ಮೇಘಾ ಸಂಗ್ರಹಿಸಿ ತಂದ ದಾಖಲೆಗಳೊಂದಿಗೆ ಉಪಗ್ರಹದ ಒಂದೊಂದು ಚಿತ್ರವನ್ನೂ ತಾಳೆ ಮಾಡಿ ನೋಡಲಾಗುತ್ತಿತ್ತು. ಅನುಮಾನ ಬಂದ ನೆಲೆಗಳ ಗುರುತು ಹಾಕಿಕೊಳ್ಳಲಾಗುತ್ತಿತ್ತು. ತಿಂಗಳುಪರ್ಯಂತ ಇಂತಹ ವಿಶ್ಲೇಷಣೆಯನ್ನು ನಡೆಸಲಾಯಿತು. ಸುಮಾರು ಎರಡು ಡಜನ್ ಬಂಧನ ಶಿಬಿರಗಳು ಪತ್ತೆಯಾದವು ಎಂದು ಬಝ್‌ಫೀಡ್ ನ್ಯೂಸ್ ವಿವರಿಸಿದೆ. ಪುಲಿಟ್ಸರ್ ಪ್ರಶಸ್ತಿಯೊಂದಿಗೆ 15 ಸಾವಿರ ಡಾಲರ್ ಬಹುಮಾನವೂ ಮೇಘಾ ಅವರಿಗೆ ಬಂದಿದೆ. ಆದರೆ, ಅದಕ್ಕಿಂತ ಹೆಚ್ಚಿನ ಗೌರವವನ್ನು ಆ ಪುರಸ್ಕಾರ ತಂದುಕೊಟ್ಟಿದೆ.

■ ಪ್ರವೀಣ ಕುಲಕರ್ಣಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65